೪) ನಿರ್ಲಕ್ಷಿತ ಜನ ಅಭ್ಯರ್ಥಿಗಳು ಹಿಂದೆ ಕೆಲಸ ಮಾಡುತ್ತಿದ್ದ ಶಾಲೆಗಳನ್ನು ಬಿಟ್ಟು ಬೇರೆ ಬೇರೆ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರುಗಳ ವಿವರಗಳು ಈ ರೀತಿ ಇವೆ.—

ಹರಿಜನ ಅಭ್ಯರ್ಥಿಗಳು	—	೨೩
ಗಿರಿಜನ —ಡು—	—	೫
ಹಿಂದುಳಿದ ಜನಾಂಗದ ಅಭ್ಯರ್ಥಿಗಳು	—	೧೮
ಬಿ. ಸಿ. ಎಮ್.	—	೪೬
ಇತರರು	—	೯೫
	ಒಟ್ಟು	೧೮೭

ಅಥಣಿ ವಿಧಾನಸಭಾ ಶಾಲಾ ಕಾಲೇಜುಗಳು.

೨೬೨. ಶ್ರೀಮತಿ. ಲೀಲಾದೇವಿ. ಆರ್. ಪ್ರಸಾದ್(ಅಥಣಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಥಣಿ ತಾಲ್ಲೂಕಿನಲ್ಲಿರುವ ಕಾಗವಾಡ ವಿಧಾನಸಭಾ ಕ್ಷೇತ್ರ ಹಾಗೂ ಅಥಣಿ ವಿಧಾನಸಭಾ ಕ್ಷೇತ್ರಗಳಲ್ಲಿರುವ ಕಾಲೇಜು ಪ್ರೌಢಶಾಲೆ, ಪ್ರಾಥಮಿಕ ಶಾಲೆ, ಮತ್ತು ತಾಂತ್ರಿಕ ಶಾಲೆ, ಮಾಧ್ಯಮಿಕ ಶಾಲೆ, ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ)		ಅಥಣಿ	ಕಾಗವಾಡ	ಒಟ್ಟು
೧)	ಪ್ರಥಮ ದರ್ಜೆ ಕಾಲೇಜುಗಳು	೧	೧	೨
೨)	ಕಿರಿಯ ಕಾಲೇಜುಗಳು	೪	೨	೬
೩)	ಪ್ರೌಢಶಾಲೆಗಳು	೧೦	೧೨	೨೨
೪)	ಕಿರಿಯ ಪ್ರಾಥಮಿಕ ಶಾಲೆಗಳು	೭೦	೮೧	೧೫೧
೫)	ಹಿರಿಯ ಪ್ರಾಥಮಿಕ ಶಾಲೆಗಳು	೫೬	೫೬	೧೧೨
೬)	ಬಾಲವಾಡಿಗಳು	೧೨	೪	೧೬
೭)	ತಾಂತ್ರಿಕ ಶಾಲೆ ಕಾಲೇಜುಗಳು	—	—	—
		೧೫೩	೧೫೬	೩೦೯

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗೆ ಬಂದ ಹರಿಜನ–ಗಿರಿಜನ ಶಿಕ್ಷಕ ಶಿಕ್ಷಕಿಯರ ಒಟ್ಟು ಅರ್ಜಿಗಳ ಬಗ್ಗೆ.

೨೯೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ) ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಮಟ್ಟದ ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ ಬಂದ ಹರಿಜನ–ಗಿರಿಜನ ಶಿಕ್ಷಕ ಶಿಕ್ಷಕಿಯರ ಒಟ್ಟು ಅರ್ಜಿಗಳೆಷ್ಟು ಕ್ಷೇತ್ರವಾರು ವಿವರ)

ಆ) ಆವರಲ್ಲಿ ಆಯ್ಕೆಯಾದ ಹರಿಜನ–ಗಿರಿಜನ ಶಿಕ್ಷಕ ಶಿಕ್ಷಕಿಯರ ಸಂಖ್ಯೆ ಎಷ್ಟು ? (ಕ್ಷೇತ್ರವಾರು ವಿವರ)